Policce pretection to the members of the House.

†ಶ್ರೀ ಹೆಚ್. ಡಿ. ದೇವೇಗೌಡ (ಹೊಳೇನರಸೀಪುರ).-ಮಾನ್ಯ ಅಧ್ಯಕ್ಷರೇ ಈಗ ನನ್ನ ಮಿತ್ರರು ಇಬ್ಬರು ಏನು ಪಸ್ತಾಪ ಮಾಡಿದ್ದಾರೆ ಆ ವಿಷಯದ ಬಗ್ಗೆ ನಾನು ರಾಜಕೀಯ ಬಣ್ಣ ಕೊಟ್ಟು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ರಾಜಕೀಯ ಬಣ್ಣ ಕೊಟ್ಟುಕೊಂಡು ಇದರ ಬಗ್ಗೆ ಹೇಳುವುದು ಉಚಿತವೂ ಅಲ್ಲ. ಮುಖ್ಯ ಮಂತ್ರಿಗಳು ರಾಜ್ಯದ ಹೊಣೆಯನ್ನು ಹೊತ್ತಿರುವುದರಿಂದ ಅವಶ್ಯ ಇದಕ್ಕೆ ಕಾರಣರು ಎಂದು ಊಹಿಸಿ ಹೇಳುವುದಕ್ಕೂ ನಾನು ತಯ್ಯಾರಾಗಿಲ್ಲ. ವಾಸ್ತವವಾದ ವಿಚಾರಗಳಿಗೆ, ಬೇರೆ ರೀತಿಯಾದ ಸಣ್ಣ ಸಣ್ಣ ಘಟನೆಗಳಿಗೆ ರಾಜಕೀಯ ಬೆರೆಸುವುದು ಸರಿಯಲ್ಲ. ಕಳೆದ ತಿಂಗಳು ೨೨ ನೇ ತಾರೀಖು ನಾನು ಹಾಗೂ ಶ್ರೀಮಾನ್ ಹನುಮೇಗೌಡರೂ ಇಬ್ಬರೂ ನಡೆಸತಕ್ಕ ಒಂದು ಕಾರ್ಯಕ್ರಮ ಇಟ್ಕೊಂಡಿದ್ದೆವು. ಅದೂ ಆ ತಾಲ್ಲೂಕಿನ ಒಂದು ಹಳ್ಳಿಯಲ್ಲಿ ಬೆಳಗ್ಗೆ ೧೨ ಗಂಟೆಗೆ ಒಂದು ವೆಟರ್ನರಿ ಡಿಸಾಪೆನಸರಿ ಉದ್ಘಾಟನಾ ಸಮಾರಂಭವನ್ನು ಉದ್ಘಾಟಿಸಲು ನಾನು ಹೋಗಿದ್ದೆ. ಮಾನ್ಯ ಶ್ರೀ ಹತಾಂಮೇಗೌಡರು ಅಧ್ಯಕ್ಷತೆ ವಹಿಸಬೇಕಾಗಿತ್ತು. ಇದಕ್ಕಾಗಿ ಅವರು ಹಂದಿಸಕೆರೆಯ ಕಾರ್ಯಕ್ರಮಕ್ಕಾಗಿ ತಾಲ್ಲೂಕು ಬೋರ್ಡು ಪ್ರೆಸಿಡೆಟರವರನ್ನು ಕಳಿಸಿ ನನ್ನ ಜೊತೆಯಲ್ಲಿ ಬಂದಿದ್ದರು, ಇವರ ಮೇಲೆ ಹಲ್ಲೆ ಹಿಸಿ ಅವರ ಜೀಪನ್ನು ನಾಶ ಮಾಡಿದರು, ಇಂದು ಆ ಜೀಪು ಪೋಲೀಸು ಸ್ಟೇಷನ್‌ನಲ್ಲಿ ಬಿದ್ದಿದೆ. ನಾನು ಕೂಡ ಈ ಘಟನೆಯ ಬಗ್ಗೆ ಅಲ್ಲಿನ ಪೋಲೀಸು ಸೂಪರಿಡೆಂರುವರನ್ನು ವಿಚಾರಿಸಿದಾಗ ಅವರು ಕಡೆ ಹೆಚ್ಚಾಗಿ ವಚ್ಚು ಗಮನಕೊಡಬೇಡಿ, ನಾನು ಎಲ್ಲ ವಿಚಾರಗಳನ್ನು ಪರಿಶೀಲಿಸುತ್ತೇನೆ, ಇದನ್ನು ಹೆಚ್ಚಾಗಿ ವೇನಸ್ಸಿಗೆ ಹಚ್ಚಿಕ್ಕೊಬೇಡಿ ಎಂದು ಹೇಳಿ ಅಲ್ಲಿಗೆ ಐದಾರು ಜನರನ್ನು ಕರೆದುಕೊಂಡು ಹೋಗಿ ಹೊಡೆದುದ್ದನ್ನು ನೋಡಿ ಬಂದರು ಎಂದು ಕೇಳಿದ್ದೇನೆ.

ಈ ಮಧ್ಯೆ ಕೆಲವು ರಾಜಕೀಯ ಮುಖಂಡರುಗಳು ಪ್ರವೇಶ ಮಾಡಿದ್ದಾರೆ. ಬಹುಶಃ ಯಾವಾಗ ಈ ಕಾಂಗ್ರೆಸ್ ಇಭ್ಭಾಗವಾಯಿತೋ ಕೆಲವು ಕೆಟ್ಟ ಎಲಿಮೆಂಟ್ಸ್ ಈ ಕಡೆಯಲ್ಲೂ ಇದ್ದಾರೆ. ಆಕಡೆಯಲ್ಲೂ ಇದ್ದಾರೆ ಆದಕ್ಕೆ ಎಲ್ಲರೂ ಕೆಟ್ಟವರು ಎಂದು ಹೇಳುವುದಕ್ಕಾಗುವುದಿಲ್ಲ. ಶ್ರೀಮಾ ಕೆ. ಹೆಚ್. ಹನುಮೇಗೌಡರು ಈ ಘಟನೆ ಕುರಿತಿರುವುದರ ರಾಜನಿಂದ ಆಗಿದೆ ಎಂದು ಏನು ಹೇಳಿದರೋ ಅವನ ಬಗ್ಗೆ ಹಿಂದಿನಿಂದಲೂ ಬೇಕಾದಷ್ಟು ನಡೆದಿದೆ. ಅವನ ಮುಖಂಡತ್ವದಲ್ಲಿ ಇದು ನಡೆದಿದೆ. ಅವನು ಈ ಪಕ್ಷದ ಪ್ರಮುಖ ಎಂದು ಒಪ್ಪಿಕೊಂಡಿರಬೇಕು. ಆದರ ಬಗ್ಗೆ ನಾನು ಬೆಲೆ ಕೊಡುವುದಿಲ್ಲ. ಆದರೆ ಅವನಿಗೆ ರಕ್ಷಣೆ ಕೊಡುವುದಕ್ಕೆ ಏನು ಪ್ರಯತ್ನ ಮಾಡುತ್ತಿದ್ದಾರೆ ಅದು ಆಗಬಾರದು. ಈ ಅಸೆಂಬ್ಲಿ ಪ್ರಾರಂಭವಾದ ದಿವಸವೇ ಈ ವಿಷಯದ ಬಗ್ಗೆ ಪ್ರಸ್ತಾಪ ಮಾಡಬೇಕು ಎಂದು ಕೇಳಿದರು ನಾನು ಬೇಡ ಎಂದು ಹೇಳಿದೆ ಪೋಲೀಸ್ ಅಧಿಕಾರಿಗಳು ಇದರ ಬಗ್ಗೆ ನಿಷ್ಪಕ್ಷಪಾತವಾಗಿ ವಿಚಾರಣೆ ಮಾಡುತ್ತಾರೆ. ಇದರಲ್ಲಿ ಯಾರೇ ತಪ್ಪಿತಸ್ಥರೇ ಇರಲಿ ಅವರ ಬಗ್ಗೆ ತಕ್ಕ ಕ್ರಮ ತೆಗೆದುಕೊಳ್ಳುತ್ತಾರೆ, ಇದಕ್ಕೆ ರಾಜಕೀಯ ಬಣ್ಣ ಹಚ್ಚುವುದು ಬೇಡ ಎಂದು ಹೇಳಿದೆ. ನನಗೆ ತಿಳಿದ ಮಟ್ಟಿಗೆ ಅಲ್ಲಿಯ ಎಸ್. ಪಿ. ಅವರು ಯೋಗ್ಯ ಮನುಷ್ಯ ಎಂದು ತಿಳಿದುಕೊಂಡಿದ್ದೇನೆ. ಆದರೆ ಈಗ ಅವರಿಗೆ ಏನಾಗಿದೆ ಎಂದರೆ ರಾಜಕಾರಣಿಗಿಂತಲೂ ಮೇಲ್ಪಟ್ಟವರು ಅವರ ಬಗ್ಗೆ ಬರೆದು ಕಳುಹಿಸಿದ್ದಾರೆ ಅವರು ಪಾರ್ಲಿಮೆಂಟ್ ಸದಸ್ಯರು ಇರಬಹುದಂ. ಅವರು ಎಸ್. ಪಿ ಹತ್ತಿರ ಹೋಗಿ ಅವರನ್ನು ಅರೆಸ್ಟ್ ಮಾಡಿದರೆ ನಾವು ಕೇಸುಗಳನ್ನು ಹಾಕುವುದಕ್ಕೆ ಪ್ರಯತ್ನ ಮಾಡುತ್ತೇವೆ ಅವರನ್ನು ಅರೆಸ್ಟ್ ಮಾಡಬೇಡಿ ಎಂದು ಹೆದರಿಸಿದ್ದಾರೆ. ಅಲ್ಲದೆ ನನಗೂ ಒಂದು ರುಜು ಇಲ್ಲದ ಕಾಗದ ಬಂದಿದೆ. ನನ್ನ ರೂಮಿಗೆ ಪೋಸ್ಟ್ ಕಾರ್ಡ್ ಬಂದಿದೆ. ನನ್ನನ್ನೂ ಹೆದರಿಸಿದ್ದಾರೆ ಜಯಲಲಿತ ಪ್ರಕರಣವನ್ನು ಇಲ್ಲಿ ಪ್ರಸ್ತಾಪಿಸಿದ ಕಾರಣ ನನಗೂ ಒಂದು ಬೇನಾಮಿ ಕಾಗದ ಬಂದಿದೆ. ಏತಕ್ಕೆ ಇದನ್ನು ಪ್ರಸ್ತಾಪ ಮಾಡುತಿದ್ದೇನೆ ಎಂದರೆ ನಾವು ಇಲ್ಲಿ ಕೆಲಸ ಮಾಡತಕ್ಕಂಥ ಕಾಲದಲ್ಲಿ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಬೇಕಾಗುತ್ತದೆ. ಕೆಲವು ವೇಳೆ ಸರ್ಕಾರಕ್ಕೆ ಗೊತ್ತಿಲ್ಲದೇ ನಡೆಯತಕ್ಕಂಥ ಘಟನೆಗಳು ಇವೆ. ಅದನ್ನು ಸರ್ಕಾರದ ಗಮನಕ್ಕೆ ತಂದರೆ ತಪ್ಪು ಇದ್ದರೆ ಅದನ್ನು ಸರಿಮಾಡುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಪ್ರಸ್ತಾಪ ಮಾಡಬೇಕಾಗುತ್ತದೆ. ಇದರಿಂದ ಯಾರಾದರೂ ಕಷ್ಟಕ್ಕೆ ಗಾರಿತಕ್ಕಂಥ ಜನ ಅವರ ಮಟ್ಟಿದಲ್ಲಿ ಹೀಗೆ ಶಾಸಕರ ಮೇಲೆ ಒಂದು ಸೇಡು ತೀರಿಸಿಕೊಳ್ಳತಕ್ಕಂಥ ಮನೋಭಾವ ಇಟ್ಟುಕೊಂಡು ಮಾಡುವುದು ಯೋಗ್ಯವಲ್ಲ, ಘಟನೆ ಈ ರೀತಿ ನಡೆದಿರುವುದರಿಂದ ದಯಮಾಡಿ ಈ ವಿಷಯದಲ್ಲಿ ಸರಿಯಾದಂಥ ಸಿ.ಐ ಡಿ. ಆಫೀಸರನ್ನು ಅಲ್ಲಿಗೆ ಕಳುಹಿಸಿ ವಿಚಾರಣೆ ಮಾಡಿ ಮುಂದೆ ಈ ರೀತಿ ಘಟನೆ ಆಗದಂತೆ ತಕ್ಕ ಕ್ರಮ ತೆಗೆದುಕೊಳ್ಳಿ. ಒಬ್ಬೊಬ್ಬ ಎಂ ಎಲ್. ಎ.ಗೇ ರಕ್ಷಣೆ ಕೊಡುವುದು ಕಷ್ಟ, ಆ ರೀತಿ ಕಳುಹಿಸುವುದಕ್ಕಾಗುವುದಿಲ್ಲ. ನಾನೂ ಕೂಡ ಒಪ್ಪುತ್ತೇನೆ. ಅವರು ಈ ಬಗ್ಗೆ ೪ ವರ್ಷದ ಹಿಂದೆಯೇ ರಕ್ಷಣೆ ಕೇಳಿದರು ನನಗೆ ಭಯ ಇದೆ, ನನ್ನ ಪ್ರಾಣಕ್ಕೆ ಭಯ ಬರುತ್ತಿದೆ ಎಂದು ಪ್ರಸ್ತಾಪ ಮಾಡಿದ್ದಾರೆ. ನಿನ್ನೆ ದಿವಸ ಆ ಘಟನೆ ನಡೆದಿದೆ. ಪಕ್ಷಗಳ ಜಿಜ್ಞಾಸೆಗಳು ಎಷ್ಟೇ ಇರಲಿ

ಶ್ರೀ ಎಚ್. ಡಿ. ದೇವೇಗೌಡ

ವಿರೋಧ ಪಕ್ಷದಲ್ಲೀ ಇರಲಿ, ಆಡಳಿತ ಪಕ್ಷದಲ್ಲೇ ಇರಲಿ ಈ ರೀತಿ ಆಗಬಾರದು. ಪಕ್ಷಗಳಲ್ಲಿ ಭೇಧಭಾವ ಬಂದೇ ಬರುತ್ತದೆ ಹಿಂದಿದ್ದ ಮುಖ್ಯ ಮಂತ್ರಿಗಳ ಕಾಲದಲ್ಲಿ ಒಬ್ಬ ಸದಸ್ಯರ ಮೇರವಣಿಗೆ ಮಾಡಿಸಿದರಂ ಎಂದು ರಾಜಕೀಯ ಬೆಳೆಸಿ ಆ ಹಗೆಯನ್ನು ದಮನ ಮಾಡಬೇಕು ಎಂದು ಈ ರೀತಿ ಮಾಡುವಂಥದು ಯೋಗ್ಯವಾದುದಲ್ಲ. ಆದುದರಿಂದ ಮುಂದೆ ಯಾರಾದರೂ ಸರ್ಕಾರ ಆಸಕ್ತಿಯನ್ನು ವಹಿಸಿ ಇಂತಹ ಘಟನೆ ನಡೆಯದೆ ಇರುವ ರೀತಿಯಲ್ಲಿ ತಾವು ರಕ್ಷಣೆ ಕೊಡಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Statement of the Ministers for Industries *Re.* Ptroection to members.

†ಶ್ರೀ ಎಸ್. ಎಂ. ಕೃಷ್ಣ:—(ಕೈಗಾರಿಕಾ ಶಾಖೆಯ ಮಂತ್ರಿಗಳು) ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ಹೆಚ್. ಎಸ್. ಸಿದ್ಧಪ್ಪನವರ ಮೇಲೆ ಯಾರೋ ಕೈ ಮಾಡಿರತಕ್ಕಂಥ ಪ್ರಕರಣ ಈಗ ತಾನೆ ನಮ್ಮ ಗಮನಕ್ಕೆ ಬಂದಿದೆ. ಈ ಕೃತ್ಯ ಯಾರೇ ಮಾಡಿರಲಿ, ಯಾವ ಸಂದರ್ಭದಲ್ಲಿ ಮಾಡಿರಲಿ ಅದನ್ನು ತೀವ್ರವಾಗಿ ಖಂಡಿಸಬೇಕಾಗಿರತಕ್ಕಂಥಾದ್ದು ಈ ಸದನದ ಜವಾಬ್ದಾರಿ ಜೊತೆಗೆ ನಿನ್ನೆ ರಾತ್ರಿ ಏನಾ ಘಟನೆ ನಡೆದಿದೆ ಅದರ ಬಗ್ಗೆ ತೀವ್ರತರವಾದ ತನಿಖೆ ಸರ್ಕಾರದ ವತಿಯಿಂದ ಮಾಡಿಸುತ್ತೇನೆ ಎನ್ನುವ ಭರವಸೆಯನ್ನು ಈ ಸಭೆಗೆ ತಿಳಿಸುವುದಕ್ಕೆ ಇಚ್ಛೆ ಪಡುತ್ತೇನೆ. ಮತ್ತು ಈ ಸಭೆಯ ಸದಸ್ಯರೆಲ್ಲರಿಗೂ ಬಹು ಹೆಚ್ಚಿನ ಹೊಣೆಗಾರಿಕೆ ಇದೆ. ರಾಜ್ಯದಲ್ಲಿ ಆಗತಕ್ಕಂತ ಎಲ್ಲ ವ್ಯವಹಾರಗಳ ಬಗ್ಗೆ ಅವರಿಗೆ ಸೂಕ್ತವಾದಂತ ನಿಲುವುಗಳನ್ನು ಆಗಿಂದಾಗ್ಗೆ ತೆಗೆದುಕೊಳ್ಳಬೇಕಾಗುತ್ತದೆ. ಆ ನಿಲುವನ್ನು ತೆಗೆದುಕೊಳ್ಳತಕ್ಕಂತ ಸರ್ವ ಸ್ವಾತಂತ್ರ್ಯ ಪ್ರತಿಯೊಬ್ಬ ಮಾನ್ಯ ಸದಸ್ಯರಿಗೂ ಇದೆ ಅದನ್ನು ಕುಂಠಿತಗೊಳಿಸತಕ್ಕಂತ ಯಾವುದೇ ಬೆಳವಣಿಗೆಯನ್ನೂ ಸಹ ಈಗ ಅಸ್ತಿತ್ವದಲ್ಲಿರತಕ್ಕಂಥ ಸರ್ಕಾರ ಸಹಿಸುವುದಿಲ್ಲ ಎಂದು ನಾನು ಪ್ರಾಮಾಣಿಕವಾಗಿ ಹೇಳಲು ಇಚ್ಛೆಪಡುತ್ತೇವೆ. ಆದುದರಿಂದ ಯಾರಾದರೂ ಈ ಘಟನೆಗೆ ಜವಾಬ್ದಾರರು ಎಂದು ಭಾವಿಸುವುದಾದರೆ ಅದು ಔದಾರ್ಯರಹಿತವಾದ ಭಾವನೆ ಆದೀತು ಎಂದು ಬಹಳ ನಮ್ರತೆಯಿಂದ ಹೇಳಲು ಇಚ್ಛೆಪಡುತ್ತೇನೆ. ಈ ಮನೆಯ ಮಾನ್ಯ ಸದಸ್ಯರೊಬ್ಬರ ಮೇಲೆ ಕೈ ಮಾಡಿರುವುದು ಪ್ರತಿಯೊಬ್ಬ ಸದಸ್ಯರ ಮೇಲೂ ಕೈ ಮಾಡಿದಂತೆ ಎನ್ನುವುದನ್ನು ತಾವು ಮರೆಯಬಾರದು. ತಾವು ಅದರ ಬಗ್ಗೆ ಎಷ್ಟು ತೀವ್ರತೆ, ಕಳಕಳಿ ಹರಿಸುತ್ತಿರೋ ಅಷ್ಟೇ ತಿವ್ರತೆ ಕಳಕಳಿ ನಾವೂ ಸಹ ಅವರ ಬಗ್ಗೆ ಗಮನವನ್ನು ಹರಿಸುತ್ತೇನೆ ಎನ್ನುವ ಆಶ್ವಾಸನೆಯನ್ನು ಕೊಡಲು ಇಚ್ಛೆಪಡುತ್ತೇನೆ.

ಅಧ್ಯಕ್ಷರೇ, ಮಹಾಚುನಾವಣೆಗಳು ನಡೆದು 10 ತಿಂಗಳಾಯಿತು. ಚುನಾವಣೆಯ ಸಮಯದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಹಾಗೆ ಆಗಿಂದಾಗ್ಗೆ ಸ್ಥಳೀಯ ಕಾರಣಗಳಿಗಾಗಿ ಸ್ಥಳೀಯವಾಗಿ ಕೆಲವು ದ್ವೇಷಗಳು, ಕೆಲವು ಅಸಮಧಾನಗಳು ಇರತಕ್ಕದ್ದು ಸ್ವಾಭಾವಿಕ. ಅದನ್ನು ತಪ್ಪಿಸುವುದಕ್ಕೆ ಸಾಧ್ಯವಾಗತಕ್ಕಂಥ ಮಾತೇ, ಆದರೆ 10 ತಿಂಗಳಾದ ಮೇಲೂ ಅದು ಮರುಕಳಿಸತಕ್ಕಂತಾದ್ದು ಸಾಧ್ಯವೇ ಎನ್ನುವುದನ್ನೂ ಕೂಡ ಆಲೋಚನೆ ಮಾಡಬೇಕು ಮಾನ್ಯ ಹೆಚ್. ಎಸ್. ಸಿದ್ಧಪ್ಪನವರು ಈ ಬಗ್ಗೆ ಕಳಕಳಿಯಿಂದ ಮಾತನಾಡಿದ್ದಾರೆ, ಅವರೂ ನಮ್ಮ ಸ್ನೇಹಿತರೇ. ಮಾನ್ಯ ವಿರೊಧಪಕ್ಷದ ನಾಯಕರೂ ಕೂಡ ಅದರ ಬಗ್ಗೆ ಹೇಳಿದ್ದಾರೆ ಅಲ್ಲಿರತಕ್ಕ ಪೋಲಿಸ್ ಅಧಿಕಾರಿಗಳು ಈ ವಿಚಾರದಲ್ಲಿ ತೀವ್ರ ಗಮನ ಹರಿಸಿದ್ದಾರೆ ಎಂದು. ಅಷ್ಟು ಮಾತ್ರ ನಾನು ಈ ಸದನದ ಮುಂದೆ ಹೇಳುತ್ತೆನೆ. ಲಾ ಆಂಡ್ ಆರ್ಡರ್ ಪ್ರಶ್ನೆ ಬಂದಾಗ ದೇಶದ ಶಾಸನ ಸಭಾ ಸದಸ್ಯರೇ ಅಲ್ಲ ಪ್ರತಿಯೊಬ್ಬ ನಾಗರೀಕನ ಹಕ್ಕು ಭಾದ್ಯತೆಯ ರಕ್ಷಣೆ ಬಗ್ಗೆ ಪಕ್ಷಭೇದವಿಲ್ಲದೆ ಸರ್ಕಾರ ಕೆಲಸ ಮಾಡುತ್ತದೆ ಎಂದು ಶ್ರುತಪಡಿಸುತ್ತೆನೆ. ಮಾನ್ಯ ಹೆಚ್. ಎಸ್. ಸಿದ್ಧಪ್ಪನವರು ನಿನ್ನೆ ನಡೆದ ಘಟನೆ ಬಗ್ಗೆ ಏನು ಹೇಳಿದ್ದಾರೋ ಅವರ ಮನಸ್ಸನ್ನು ನೋಯಿಸದೆ ಅದರ ಬಗ್ಗೆ ನಮ್ಮ ಇಲಾಖೆಯಿಂದ ಫ್ಯಾಕ್ಟ್ಸ್‌ಗಳನ್ನು ತರಿಸುವುದಕ್ಕೆ ಏರ್ಪಾಡು ಮಾಡುತ್ತೇವೆ. ಆದರೆ ನಾನು ಇನ್ನೂ ಒದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ ಮಾನ್ಯ ಸದಸ್ಯರಿಗೆ ಯಾರಿಗಾದರೂ ಇಂತಹ ಸೂಚನೆ ಕಂಡುಬಂದಾಗ, ತಮ್ಮ ಮೇಲೆ ಹತ್ಯ ನಡೆಯತಕ್ಕಂಥ ಅವಕಾಶಗಳು ಇವೆ ಎಂದು ಕಂಡು ಬಂದಾಗ ಸರ್ಕಾರಕ್ಕೆ ಅದನ್ನು ತಿಳಿಸಿದರೆ ಅವರಿಗೆ ಸೂಕ್ತವಾದಂತ ಪ್ರೊಟೆಕ್ಷನ್ ಕೊಡತಕ್ಕ ವ್ಯವಸ್ಥೆಯನ್ನೂ ಕೂಡ ಶಾಸನ ಸಭೆ ನಡೆಯತಕ್ಕಂಥ ಸಮಯದಲ್ಲಿ ನಾವು ದೊರಕಿಸಿಕೊಡುವುದಕ್ಕೆ ಏರ್ಪಾಡು ಮಾಡುತ್ತೇನೆ.